ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-6 Issue 2, September-October, 2024, Pp. 95-100
©*IIMRD*, Mysuru

IIMRD JOURNALS

www.iimrd.com

# ಜಗನ್ನಾಥದಾಸರು 'ಹರಿಕಥಾಮೃತಸಾರ'ದಲ್ಲಿ ಉಲ್ಲೇಖಗೊಂಡಿರುವ ಅನುಭಾವಿಯ ಲಕ್ಷಣಗಳು: ಒಂದು ವಿವೇಚನೆ

**ಜಗದೀಶ ಕೆ[1] ಮತ್ತು ಪ್ರೊ. ಡಿ. ವಿಜಯಲಕ್ಷ್ಮಿ[2]**

[1]ಸಂಶೋಧನಾ ವಿದ್ಯಾರ್ಥಿ, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

[2]ಪ್ರಾಧ್ಯಾಪಕರು, ಕನ್ನಡ ವಿಭಾಗ, ಮಹಾರಾಜ ಕಾಲೇಜು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಸಾರಾಂಶ: (Abstract)**

*ಕನ್ನಡ ಸಾಹಿತ್ಯದಲ್ಲಿ ವೀರಶೈವ ವಚನ ಸಾಹಿತ್ಯದಷ್ಟೇ ಪ್ರಭಾವ ಬೀರಿರುವ ಮತ್ತೊಂದು ಪ್ರಕಾರ ದಾಸ ಸಾಹಿತ್ಯ. ಮುಕ್ತಿಯನ್ನು ಹೊಂದಬೇಕಾದರೆ ಭಕ್ತಿ ವೈರಾಗ್ಯಗಳು ಅವಶ್ಯಕ. ಇದನ್ನು ಸ್ಫೂರ್ತಿಯಿಂದ ಸರಳವಾಗಿ ಕೀರ್ತನೆಗಳಿಂದ ನಿರೂಪಿಸುವುದೇ ದಾಸ ಸಾಹಿತ್ಯ. ಇದು ನಾಡಿನ ಜನತೆಯ ಗಮನವನ್ನು ಸೆಳೆದಿದೆ. ದಾಸ ಎಂದರೆ ಯಾರು, ಅವನು ಯಾರ ದಾಸ ಎನ್ನುವ ಪ್ರಶ್ನೆಗಳಿಗೆ ಅನುವು ಮಾಡಿಕೊಡುತ್ತದೆ. ದಾಸ ಎಂದರೆ ಭಕ್ತ, ಹರಿಭಕ್ತ. ಹರಿ ಎಂದರೆ ಕೃಷ್ಣ ಗೋಪಾಲ ಜಗನ್ನಾಥ ಪುರಂದರ ವಿಠಲ, ಹಯವದನ, ರಂಗವಿಠಲ, ಆದಿಕೇಶವ, ವಿಜಯವಿಠಲ, ಪ್ರಸನ್ನ ವೆಂಕಟ ಕಾಗಿನೆಲೆಯಾದಿ ಕೇಶವ, ಮೊದಲಾಗಿ ತಮ್ಮ ತಮ್ಮ ಕೀರ್ತನೆಗಳಿಗೆ ಇರಿಸಿಕೊಂಡಿರುವ ಅಂಕಿತಗಳೇ ಆಗಿದ್ದು, ಇವೆಲ್ಲವೂ ಜಗದ್ರಕ್ಷಕನಾದ ವಿಷ್ಣುವಿಗೆ ಅನ್ವಯವಾಗುವ ಇತರೆ ಹೆಸರುಗಳಾಗಿವೆ. ವಿಷ್ಣುವಿನ ಆರಾಧನೆ ಮತ್ತು ದರ್ಶನ ಕುರಿತಂತೆ ಅನೇಕರು ಅನೇಕ ಕೃತಿಗಳನ್ನು ರಚಿಸಿದ್ದಾರೆ. ಇಂತಹ ದಾಸ ಪರಂಪರೆಯಲ್ಲಿ ಒಬ್ಬರಾದ ಜಗನ್ನಾಥದಾಸರು ಸುಮಾರು ಸಾವಿರ ಭಾಮಿನೀ ಷಟ್ಪದಿಯಲ್ಲಿರುವ 'ಹರಿಕಥಾಮೃತಸಾರ'ವನ್ನು ಬರೆದು ದ್ವೈತತತ್ವ ಸಿದ್ಧಾಂತವನ್ನು ತಮ್ಮ ಕಾವ್ಯದಲ್ಲಿ ಪ್ರತಿಪಾದಿಸಿದ್ದಾರೆ. ಈ ಕೃತಿಯು ಮಧ್ವಾಚಾರ್ಯರ ದ್ವೈತ ಸಿದ್ಧಾಂತವನ್ನು ಪ್ರತಿಪಾದಿಸುವ ಮಹತ್ಕೃತಿಯಾಗಿದೆ.*

**ಮುಖ್ಯಪದಗಳು (Keywords):** *ದಾಸ ಸಾಹಿತ್ಯ, ಕೀರ್ತನೆಗಳು, ದ್ವೈತತತ್ವ ಸಿದ್ಧಾಂತ, ಹರಿಕಥಾಮೃತಸಾರ.*

**ಪೀಠಿಕೆ**

ಹರಿಕಥಾಮೃತಸಾರ ಕೃತಿಯಲ್ಲಿ ಜಗನ್ನಾಥದಾಸರು ಅನುಭಾವಿಕ ನೆಲೆಯ ಕುರಿತ ಅನೇಕ ವಿಚಾರಗಳನ್ನು ವಿವರಿಸುತ್ತಾರೆ. ದ್ವೈತ ಸಿದ್ಧಾಂತದ ಪ್ರತಿಪಾದನೆಯ ಮೂಲಕ ಅನುಭಾವದ ವಿವಿಧ ನೆಲೆಗಳ ದರ್ಶನವನ್ನು ಮಾಡಿಸುವ ವಿಶೇಷ ಕೃತಿ '**ಶ್ರೀಹರಿಕಥಾಮೃತಸಾರ**' ಕೃತಿಯಾಗಿದೆ. ಯಾವ ಶಾಸ್ತ್ರಕ್ಕಾದರೂ ಅನುಭವವೇ

*Please cite this article as:* ಜಗದೀಶ ಕೆ ಮತ್ತು ಡಿ. ವಿಜಯಲಕ್ಷ್ಮಿ. (2024). ಜಗನ್ನಾಥದಾಸರು 'ಹರಿಕಥಾಮೃತಸಾರ'ದಲ್ಲಿ ಉಲ್ಲೇಖಗೊಂಡಿರುವ ಅನುಭಾವಿಯ ಲಕ್ಷಣಗಳು: ಒಂದು ವಿವೇಚನೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 6(2). ಪು.ಸಂ.* 95–100

ಒರೆಗಲ್ಲು. ಪಾರಮಾರ್ಥಿಕ ಪ್ರಯತ್ನದ ಪರಮಫಲ ಈ ಅಪರೋಕ್ಷ ಜ್ಞಾನ. ಭಗವಂತನ ಸಾಕ್ಷಾತ್ಕಾರ ಮತ್ತು ಅದರೊಡನೆ ಒದಗಿ ಬರುವ ಪರಮ ಆನಂದ ಅನುಭವಕ್ಕೆ ಬರುವವರೆಗೂ ಸಂಸಾರದ ಬಂಧನ ಹರಿಯುವುದಿಲ್ಲ. ಬಿಡುಗಡೆಯೂ ಇಲ್ಲ. ಆದರೆ ಸಾಕ್ಷಾತ್ಕಾರವಾದ ನಂತರ ಅವನಿಗೆ ಪುಣ್ಯ ಪಾಪಗಳ ಲೇಪವಿಲ್ಲ. ಅಬಿಂಬ ದರ್ಶನವಾದ ನಂತರ ಸಂಚಿತಕರ್ಮವೆಲ್ಲವೂ ದಹಿಸಿ, ಆಗಾಮಿಕ ಕರ್ಮಕ್ಕೆ ಅವಕಾಶವಿಲ್ಲದೆ ಮೂಲವೂ, ಅನಾದಿಯಿಂದ ಬದ್ಧವಾದುದು ಆದ ಪ್ರಾರಬ್ಧಕರ್ಮದ ಭೋಗ ಆರಂಭವಾಗುತ್ತದೆ. ಇಂತಹ ಸಿದ್ಧಿ ಬೇಕು ಬೇಕಾದವರಿಗೆ ಬೇಕು ಬೇಕಾದಾಗ ಸುಲಭವಾಗಿ ದೊರೆಯುವುದಿಲ್ಲ. ನಮ್ಮ ಪ್ರಯತ್ನ ಭಕ್ತಿ, ಜ್ಞಾನ, ಔದಾರ್ಯ ಮತ್ತು ವೈರಾಗ್ಯ ಇಲ್ಲಿ ಬಹಳ ಮುಖ್ಯ. ಇದರೊಂದಿಗೆ ಪರಮಾತ್ಮನ ಕೃಪೆಯೂ ಸಹ ಮುಖ್ಯವಾಗಿರುತ್ತದೆ.

ಸಕ್ಕರೆಯ ಸಿಹಿ ಸವಿಯುವವರೆಗೂ ಸಿಕ್ಕಾಲಾರದು. ಆದರೆ ಒಮ್ಮೆ ಸವಿದ ನಂತರ ಅದನ್ನು ಮತ್ತೆ ಮತ್ತೆ ಸವಿಯಬೇಕೆನ್ನುವ ಆಸೆಯು ಮೂಡುತ್ತದೆ. ಈ ದಿವ್ಯದರ್ಶನ ಫಲ ಕೈಸೇರಬೇಕಾದರೆ ಸಾಧಕನು ತನ್ನ ಚಿತ್ತಕ್ಷೇತ್ರವನ್ನು ಶುದ್ಧಿಮಾಡಿ, ಸಂಯಮ ನಿಯಮಗಳಿಂದ ಹದಮಾಡಿ ಪರಮಾತ್ಮ ಪ್ರೇಮ ಅಂದರೆ ಭಕ್ತಿ ಬೀಜವನ್ನು ಬಿತ್ತಿ ಉತ್ಕಟತೆ, ಉತ್ಸಾಹಗಳನ್ನು ತುಂಬಿಕೊಂಡು ಪರಮಾತ್ಮನ ಕೃಪೆಗೆ, ಕರುಣೆಗೆ ಕಾಯಬೇಕು. ಸಕಾಲ ಒದಗಿಬಂದಾಗ ಅವನ ಆಕಾಂಕ್ಷೆ ಪೂರ್ಣವಾಗುತ್ತದೆ. ಇದಕ್ಕೆ ಒಂದು ಜನ್ಮ ಎಂದಿಗೂ ಸಾಲದು. ಅವನವನ ಯೋಗ್ಯತೆಯ ಪ್ರಕಾರ ಎಷ್ಟೋ ಜನ್ಮಗಳನ್ನು ಎತ್ತಬೇಕಾಗುತ್ತದೆ. ಆನಂತರವೇ ಜೀವಿಗೆ ಭಗವಂತನ ಸಾಕ್ಷಾತ್ಕಾರ ದೊರೆಯುವುದಾಗಿದೆ.

ಭಗವಂತನ ಸಾಕ್ಷಾತ್ಕಾರವಾಗಬೇಕಾದರೆ ಸೂರ್ಯನಷ್ಟು ಪ್ರತ್ಯಕ್ಷ ಅನುಭವವಿರಬೇಕು. ಅನ್ಯಸಾಕ್ಷಿಯ ಅಪೇಕ್ಷೆ ಇರಬಾರದು. ಅದು ಯಾವ ಬಾಹ್ಯ ಪರಮಾಣಗಳಿಂದಲೂ ಬಾಧಿತವಾಗಬಾರದು. ಅದರ ಕುರಿತು ಎಳ್ಳಷ್ಟೂ ಸಂಶಯವಿರಬಾರದು. ಅದು ಅನಿರ್ವಚನೀಯವೆನಿಸಬೇಕು, ತನುಮನಭಾವಗಳನ್ನೆಲ್ಲಾ ಪೂರ್ಣವಾಗಿ ವೇಧಿಸಬೇಕು. ಒಂದು ಬಗೆಯ ಕೃಥಾರ್ತ ಭಾವನೆ ಮೂಡಬೇಕು. ನಿರತಿಶಯವಾದ ಆನಂದವನ್ನು ಅದು ತಂದುಕೊಡಬೇಕು. ಆ ಲಕ್ಷಣಗಳನ್ನುಳ ಸ್ಫುರಣಾತ್ಮಕ ಆಂತರಿಕ ಅನುಭವವೇ ಸಾಕ್ಷಾತ್ಕಾರ. ಇಂತಹ ಅನುಭವ ಹೊಂದಿದವನೇ ಸಂತರು. ಅವರ ಅಪೂರ್ವ ಅನುಭವದ ನೆಲೆ ಅನುಭಾವದ ನೆಲೆಯೆನ್ನಬಹುದಾಗಿದೆ.

ಈ ಅನುಭೂತಿಯನ್ನು ಪಡೆದುಕೊಳ್ಳುವ ಅನುಭಾವಿಗೆ ತನ್ನದೇ ಆದ ಲಕ್ಷಣಗಳು ಇರಬೇಕಾಗುತ್ತದೆ ಎನ್ನುವುದರ ಮೂಲಕ ಅನುಭಾವಿಯ ಲಕ್ಷಣಗಳನ್ನು ಜಗನ್ನಥಾದಾಸರು ತಮ್ಮ ಕೃತಿಯಲ್ಲಿ ಒಡಮೂಡಿಸಿದ್ದಾರೆ.

**ಅನುಭಾವಿಯ ಲಕ್ಷಣಗಳು**

'ಅನುಭಾವ'ವೆಂಬುದು ಒಂದು ವಿಶಿಷ್ಟ ಮನಃಸ್ಥಿತಿಯಾಗಿದ್ದು, ಇಂದ್ರಿಯೇಚ್ಛೆಗಳಿಂದ ಮುಕ್ತವಾಗಿರುವುದನ್ನೇ 'ಅನುಭಾವ' ಸ್ಥಿತಿ ಎನ್ನಬಹುದಾಗಿದೆ. ಈ ಸ್ಥಿತಿಯನ್ನು ಸಾಧಿಸಲಾಗುವುದು ಲಿಂಗಾಂಗಸಾಮರಸ್ಯದ ಹಂತವನ್ನು ತಲುಪಿದಾಗ, ಅಥವಾ ತಲುಪಲು ಸಾಧನೆ ಮಾಡುವುದರಲ್ಲಿ ಸಾಫಲ್ಯವನ್ನು ಪಡೆದಾಗ ಮಾತ್ರ ಸಾಧ್ಯವಾಗುವುದಾಗಿದೆ. ಇಂತಹ ಸಾಧನೆಯನ್ನು ಮಾಡುವ ಅನುಭಾವಿಗೆ

ಅವನದೇ ಕೆಲವು ಲಕ್ಷಣಗಳು, ಅರ್ಹತೆಗಳು ಇರಬೇಕಾಗುತ್ತದೆ. ಅಂದರೆ ಇಲ್ಲಿ ಜಗನ್ನಾಥದಾಸರು ಯಾರು ಕರ್ಮಗಳನ್ನು ಸರಿಯಾದ ಕ್ರಮದಲ್ಲಿ ಕೈಗೊಳ್ಳುವರೇ ಅವರೇ ಅನುಭೂತಿಗೆ ಅರ್ಹರು, ತಾತ್ವಿಕಾಧಿಕಾರಿಗಳೂ ಆಗುತ್ತಾರೆ ಎನ್ನುವುದನ್ನು ವಿವರಿಸುತ್ತಾರೆ.

ಜಗನ್ನಾಥದಾಸರು ಯಾರು ಮೋಕ್ಷಕ್ಕೆ ಅರ್ಹರು ಎನ್ನುವುದನ್ನು ಸಂಕ್ಷಿಪ್ತವಾಗಿ ಜಗನ್ನಾಥದಾಸರು ಈ ಬಗೆಯಲ್ಲಿ ವಿವರಿಸುತ್ತಾರೆ.

***ವೇದಶಾಸ್ತ್ರ ಪುರಾಣಕಥೆಗಳ***
***ಓದಿ ಹೇಳದಿರೇನು ಸಕಲ ನಿ***
***ಷೇಧ ಕರ್ಮವ ತೊರೆದು ಸತ್ಕರ್ಮಗಳ ಮಾಡೇನು।***
***ಒದನಗಳನು ಜರಿದು ಶ್ವಾಸ ನಿ***
***ರೋಧ ಗೈಸಿದರೇನು ಕಾಮ***
***ಕ್ರೋಧ ವಳಿಯದೆ ನಾನು ನನ್ನದು ಎಂಬ ಮಾನವನು*** **(ಹ.ಕ.ಸಾ 10–16)**

ಕಾಮಕ್ರೋಧಗಳು ನಾಶವಾಗದೆ ನಾನು ನನ್ನದು ಎಂದು ಅಭಿಮಾನಪಡುವ ಮಾನವನು ವೇದಾಸ್ತ್ರಗಳನ್ನೂ, ಪುರಾಣಕಥೆಗಳನ್ನೂ ಓದಿ ಹೇಳಿದರೇನು? ಸಕಲ ನಿಷಿದ್ಧಕರ್ಮಗಳನ್ನ ತೊರೆದು ಸತ್ಕರ್ಮಗಳನ್ನು ಮಾಡಿ ಏನು ಫಲ? ಎನ್ನುವ ಪ್ರಶ್ನೆಗಳನ್ನು ಕೇಳುವ ಮೂಲಕ, ಅನುಭೂತಿಯನ್ನು ಪಡೆಯಲು ಬಯಸುವ ಮಾನವನಿಗೆ ಕಾಮಕ್ರೋಧಗಳು ಇರಬಾರದು. ಅದು ಅಳಿಯದೆ ನಾನು ನನ್ನದು ಎನ್ನುವ ಧೋರಣೆ ಹೋಗುವುದಿಲ್ಲ. ಹೀಗೆ ನಾನು ನನ್ನದು ಎನ್ನುವ ಮನುಷ್ಯನು ಎಂದಿಗೂ ಸದ್ಗತಿಯನ್ನು ಹೊಂದಲಾರ ಎನ್ನುವುದನ್ನು ಜಗನ್ನಾಥದಾಸರು ತನ್ನ ಅನುಭಾವದ ಮೂಲಕ ಸಾರುತ್ತಾರೆ. ಭಗವಂತನು ಜೀವನಾವಶ್ಯಕ ಪದಾರ್ಥಗಳನ್ನು ನೀಡಿರುವುದು ಮಾನವನು ಉಂಡು ಕಾಮಕ್ರೋಧಾದಿಗಳ ವಶನಾಗಿ ಸಮಾಜವನ್ನು ಶೋಷಣೆ ಮಾಡುತ್ತಾ ತನ್ನ ಮಸನ್ಸನ್ನು ಹಾಳು ಮಾಡಿಕೊಳ್ಳಲಿ ಎಂದಲ್ಲ. ಬದಲಿಗೆ ಭಗವಂತನನ್ನು ಮತ್ತು ಭಗವಂತನ ಸೃಷ್ಟಿಯ ಉದ್ದೇಶವನ್ನು ತಿಳಿದುಕೊಳ್ಳುವುದಕ್ಕಾಗಿ ಆಗಿದೆ. ಹಾಗೆ ಸೃಷ್ಟಿಯ ರಹಸ್ಯವನ್ನು ಅರಿಯಬೇಕಾದರೆ ಕಾಮ, ನನ್ನದೆಂಬ ದುರಭಿಮಾನದ ಅಹಂಕಾರವನ್ನು ತ್ಯಜಿಸುವವನು ಸ್ವಾನುಭವಕ್ಕೆ ಅರ್ಹನೆನಿಸುತ್ತಾನೆ.

***ಏನು ಕೇಳಿದರೇನು ನೋಡಿದ***
***ರೇನು ಓದಿದರೇನು ಪೇಳಿದ***
***ರೇನು ಪಾಡಿದರೇನು ಮಾಡಿದರೇನು ದಿನದಿನದಿ ।***
***ಶ್ರೀನಿವಾಸನ ಜನ್ಮಕರ್ಮ ಸ***
***ದಾನುರಾಗದಿ ನೆನೆದು ತತ್***
***ಸ್ಥಾನದಲಿ ತದ್ರೂಪ ತನ್ನಾಮಕನ ಸ್ಮರಿಸದವನ*** **(ಹ.ಕ.ಸಾ 10–17)**

ಕೇಳುವುದೆಂದರೆ ಶಾಸ್ತ್ರಶ್ರವಣ, ನೋಡುವುದೆಂದರೆ ಅಚಲ ಪ್ರತಿಮೆಗಳ ದರ್ಶನ. ಓದುವುದೆಂದರೆ ಶಾಸ್ತ್ರಧ್ಯಯನ, ಪೇಳುವುದರೆ ಶಾಸ್ತ್ರಪ್ರವಚನ. ಪಾಡುವುದೆಂದರೆ ಶ್ರೀನಿವಾಸನ ಗುಣಗಾನ.

ಮಾಡುವುದೆಂದರೆ ಸತ್ಕಾರ್ಮಾನುಷ್ಠಾನ. ಹಾಗಾಗಿ ಅನುಭೂತಿಗೆ ಅರ್ಹನಾದವನಿಗೆ ಈ ಎಲ್ಲಾ ಅಭ್ಯಾಸಗಳು ಅವಶ್ಯಕವಾಗಿರುತ್ತದೆ. ಭಗವಂತನ ಜನ್ಮಕರ್ಮ ನೆನೆಯದೆ, ಅವನು ಎಲ್ಲೆಲ್ಲಿ ಯಾವ ರೂಪದಿಂದ ಯಾವ ನಾಮದಿಂದ ನೆಲೆಸಿರುತ್ತಾನೆ ಎನ್ನುವುದನ್ನು ಸ್ಮರಿಸದೆ ಶಾಸ್ತ್ರಾಧ್ಯಯನಗಳನ್ನು ಮಾಡಿದರೆ ಪ್ರಯೋಜನವಿಲ್ಲ. ಹಾಗಾಗಿ ಜಗನ್ನಾಥದಾಸರು ಇಲ್ಲಿ ಶಾಸ್ತ್ರಾಧ್ಯಯನಗಳಿಗಿಂತಲೂ ದೈವಭಕ್ತಿ, ಸತ್ಕರ್ಮಗಳು ಮುಖ್ಯವಾಗುತ್ತದೆ ಎನ್ನುವುದನ್ನು ಸಾರುತ್ತಾರೆ.

*ಕಬ್ಬಿನೊಳಗಿಹ ರಸ ವಿದಂತನಿ*
*ಗಬ್ಬ ಬಲ್ಲುದೆ ಭಾಗ್ಯ ಯೌವನ*
*ಮಬ್ಬಿನಲಿ ಮೈಮರೆದವಗೆ ಹರಿ ಸುಚರಿತಾಮೃತವು ।*
*ಲಭ್ಯವಾಗದು ಹರಿಪದಾಬ್ಜದಿ*
*ಹಬ್ಬಿದತಿ ಸದ್ಭಕ್ತಿರಸ ವುಂ*
*ಡುಬ್ಬಿ ಕೊಬ್ಬಿ ಸುಖಾಬ್ಧಿಯೊಳಗಾಡುವವನಗಲ್ಲದಲೆ* ॥ **(ಹ.ಕ.ಸಾ 10–19)**

ಕಬ್ಬಿನೊಳಗಿರುವ ರಸವನ್ನು ಹಲ್ಲಿಲ್ಲದವನು ಸವಿಯಲು ಸಾಧ್ಯವಿಲ್ಲ. ಹಾಗೆಯೇ ಪರಿಯಲ್ಲಿನ ಭಕ್ತಿರಸವನ್ನು ಅನುಭವಿಸುವವನಿಗಲ್ಲದೇ ಧನ, ಯೌವ್ವನಗಳ ಮಬ್ಬಿನಲ್ಲಿ ಮೈಮರೆಯುವವನಿಗೆ ಅನುಭೂತಿಯ ಹಾದಿ ಕಠಿಣ ಎನ್ನುತ್ತಾರೆ ಜಗನ್ನಾಥದಾಸರು.

*ಪರಮತತ್ವರಹಸ್ಯವಿದು ಭೂ*
*ಸುರರು ಕೇಳ್ವುದು ಸಾದರದಿ ನಿ*
*ಷ್ಠುರಿಗಲಿಗೆ ಮೂಢರಿಗೆ ಪಂಡಿತಮಾನಿ ಪಿಶುನರಿಗೆ ।*
*ಅರಸಿಕರಿಗಿದು ಹೇಳ್ವುದಲ್ಲನ*
*ವರತ ಭಗವತ್ಪಾದ ಯುಗಳಾಂ*
*ಬುರುಹ ಮಧುಕರವೆನಿಸುವರಿಗರುಪುವುದು ಮೋದದಲಿ* ॥ **(ಹ.ಕ.ಸಾ 10–21)**

ಹರಿಕಥಾಮೃತಸಾರ ಕೃತಿಯ ವಿಷಯವೇ ಪರಮ ತತ್ತ್ವರಹಸ್ಯವಾಗಿದೆ. ಇದನ್ನು ನಿಷ್ಠುರಿಗಳು, ಮೂಢರು, ಪಂಡಿತರು ತಾವೆಂದು ಹೇಳಿಕೊಳ್ಳುವವರಿಗೆ, ಚಾಡಿಕೋರರಿಗೆ, ಅರಸಿಕರಿಗೆ ಹೇಳಬಾರದು ಎನ್ನುವುದು ಜಗನ್ನಾಥದಾಸರ ಅಭಿಮತ. ಆಮೂಲಕ ಜಗನ್ನಾಥದಾಸರು ಯಾರು ಭಗವಂತನ ಕೃಪೆಗೆ ಪಾತ್ರರಾಗುವುದಿಲ್ಲ ಎನ್ನುವುದನ್ನು ಸ್ಪಷ್ಟವಾಗಿ ಇಲ್ಲಿ ನಿರೂಪಿಸುತ್ತಾರೆ.

*ವಾಸುದೇವನು ಒಳಹೊರಗೆ ಆ*
*ಭಾಸಕನು ತಾನಗಿ ಬಿಂಬ*
*ಪ್ರಕಾಶಿಸುವ ತದ್ರೂಪ ತನ್ನಾಮದಲಿ ಸರ್ವತ್ರ ।*
*ಈ ಸಮನ್ವಯವೆಂದೆನಿಪ ಸದು*
*ಪಾಸನೆಯಗೈದವನು ಮೋಕ್ಷಾ*
*ನ್ವೇಷಿಗಳೊಳುತ್ತಮನು ಜೀವನ್ಮುಕ್ತನವನಿಯೊಳು* **(ಹ.ಕ.ಸಾ 11–22)**

ಬಿಂಬನಾದ ವಾಸುದೇವನೊಬ್ಬನೆ ಒಳಹೊರಗೆ ಪ್ರತಿಬಿಂಬದ ಸ್ವರೂಪಕ್ಕೆ ಪ್ರಕಾಶನಾಗಿ ನೆಲೆಸಿರುತ್ತಾನೆ. ತದ್ರೂಪತನ್ನಾಮಗಳಲ್ಲಿ ಪ್ರಕಾಶಿಸುತ್ತಾನೆ. ಈ ಬಗೆಯ ಸಮನ್ವಯವೆಂಬ ಉತ್ತಮವಾದ ಪೂಜೆಯನ್ನು ಮಾಡುವವನು ಮುಮುಕ್ಷುಗಳಲ್ಲಿ ಶ್ರೇಷ್ಠನೆನಿಸುತ್ತಾನೆ. ಅವನು ಭೂಮಿಯಲ್ಲಿ ಜೀವನ್ಮುಕ್ತನಾಗುತ್ತಾನೆ ಎನ್ನುತ್ತಾರೆ ಜಗನ್ನಾಥದಾಸರು. ಮುಕ್ತಿ ಎಂದರೆ ಸ್ವರೂಪಾನಂದಾನುಭವವಾಗಿದೆ. "ಸಂಸಾರಿ ಜೀವರು ಲಿಂಗಶರೀರದಲ್ಲಿ ಜೀವಿಸುವುದನ್ನು ಬಿಟ್ಟು ಸ್ವರೂಪ ಶರಿರದಲ್ಲಿಯೇ ಸ್ವರೂಪಾನಂದವನ್ನು ಭಕ್ತಿರಸವನ್ನು ಅನುಭವಿಸುವುದೇ ಮುಕ್ತಿ"[1] ಜೀವನ್ಮುಕ್ತರು ಲಿಂಗಶರೀರದಲ್ಲಿ ಜೀವಿಸಿದ್ದೇ ತಮ್ಮ ಸ್ವಭಾವಭೂತವಾದ ಸ್ವರೂಪಾನಂದರಸವನ್ನು ಅನುಭವಿಸುತ್ತಾರೆ. ಸಮನ್ವಯಪೂಜೆ ಮಾಡುವವನು ಜೀವಸ್ವಭಾವಭೂತವಾದ ಸ್ವರೂಪಾನಂದವನ್ನು ಭಕ್ತಿರಸವನ್ನು ಹರಿಗೆ ಸಮರ್ಪಿಸಿದರೆ ಹರಿ ಅವನಿಗೆ ಲಿಂಗಶರೀರವಿರುವಾಗಲೇ ಸ್ವರೂಪಾನಂದಾನುಭವ ರೂಪವಾದ ಭಕ್ತಿರಸವನ್ನು ನೀಡುತ್ತಾನೆ. ಭಕ್ತನು ಆಗ ಲಿಂಗಭಂಗ ಹೊಂದಿದ ಮುಕ್ತನಂತೆಯೇ ಮೈಮರೆತು ಸಾಮಗಾನ ಮಾಡುತ್ತಾನೆ, ನರ್ತನ ಮಾಡುತ್ತಾನೆ. ಭೂಮಿಯಲ್ಲಿ ಇದೇ ಜೀವನ್ಮುಕ್ತಿ. ಅವನೇ ಜೀವನ್ಮುಕ್ತ ಎನ್ನುವುದನ್ನು ಈ ಪದ್ಯವು ಸಾರುತ್ತದೆ.

ಇನ್ನುಳಿದಂತೆ ಭಗವಂತನ ಅನುಭೂತಿಗೆ ಪಾತ್ರರಾಗುವವರ ಗುಣಗಳನ್ನು ಜಗನ್ನಾಥದಾಸರು ಹೇಳುವಂತೆ ಹೀಗೆ ಕ್ರೋಢೀಕರಿಸಬಹುದಾಗಿದೆ.

- ಹರಿಭಕ್ತರಿಗಲ್ಲದೆ ಕೆಟ್ಟ ಮನಸ್ಸಿನ ವ್ಯಕ್ತಿಗಳಿಗೆ ಭಕ್ತಿರಸ ದೊರೆಯುವುದಿಲ್ಲ.
- ಹರಿಯನ್ನೇ ಮುಖ್ಯ ನಿಯಾಮಕನೆಂದು ತಿಳಿದು ಕೋಪ ಲಾಭನಷ್ಟ ಸುಖ ದುಃಖ ಮೊದಲಾದ ದ್ವಂದ್ವಗಳನ್ನು ಅವನಿಗೆ ಅರ್ಪಿಸಬೇಕು.
- ಜ್ಞಾನಪೂರ್ವಕವಾಗಿ ವಿಧಿನಿಷೇಧಗಳನ್ನು ನೋಡದೆ ಕರ್ಮವನ್ನು ಮಾಡಬೇಕು.
- ಆಗ ಪರಮಾತ್ಮನು ಸಹ ಜೀವನ ಸಮೀಪದಲ್ಲಿಯೇ ಇದ್ದೂ ತಾನೂ ಕೂಡ ನಾನಾ ರೂಪಗಳನ್ನು ಧರಿಸಿ, ಒಂದು ರೂಪದಲ್ಲಿ ಪ್ರಕಟಗೊಳ್ಳದೆ ಜೀವನಕರ್ಮಗಳನ್ನು ತಾನೇ ಸ್ವತಂತ್ರವಾಗಿ ಮಾಡುತ್ತಾನೆ.
- ಸತ್ಯಸಂಕಲ್ಪನು ಹರಿ ತನ್ನ ಸಂಕಲ್ಪದಂತೆ ಅವನೇನು ಕೊಡುವನೋ ಅದು ತನಗೆ ಯೋಗ್ಯವಾದ ಪುರುಷಾರ್ಥವೆಂದು ಸಮಾಧಾನಪಟ್ಟುಕೊಳ್ಳಬೇಕು. ಅವನನ್ನು ಸದಾ ಸಂತೋಷದಿಂದಲೇ ನೆನೆಯುತ್ತಾ ಅವನ ಭಕ್ತಿರಸವನ್ನು ಅನುಭವಿಸಬೇಕು.
- ದೇವತೆಗಳನ್ನು ಸಂಶಯಪಡದೆ, ನಿಶ್ಚಿಂತರಾಗಿ ಅಂತರಾತ್ಮನಾದ ದೇವನನ್ನು ಸದಾ ನೆನೆಯಬೇಕು.

ಹೀಗೆ ಒಟ್ಟಾರೆಯಾಗಿ ಜಗನ್ನಾಥದಾಸರು ಅನುಭಾವದ ಅನುಭೂತಿಗಳನ್ನು ಗಳಿಸಕೊಳ್ಳುವ ಜೀವಾತ್ಮನು ಹೊಂದಿರಬೇಕಾದ ಅರ್ಹತೆಗಳನ್ನು ಕುರಿತು ಹೇಳುತ್ತಾರೆ. ಇವರು ಹೇಳುತ್ತಿರುವ ಈ

[1] ಶ್ರೀಹರಿಕಥಾಮೃತಸಾರ, ಸಂ.4, ಪು.84

ವಿಚಾರಗಳಲ್ಲಿ ಹೆಚ್ಚು ಸಾಮ್ಯತೆಗಳಿದ್ದು ಜೀವವೊಂದು ಪರಮಾತ್ಮನ ಅನುಭೂತಿಯನ್ನು ಗಳಿಸಿಕೊಳ್ಳುವಲ್ಲಿ ಪ್ರತಿಯೊಬ್ಬರು ಭಕ್ತಿಯನ್ನು ದೃಢವಾಗಿ ಹೊಂದಿರಬೇಕು, ಅರಿಷಡ್ವರ್ಗಗಳನ್ನು ಜಯಿಸಬೇಕು, ಸಮಾಜದ ಕೆಟ್ಟ ವಿಚಾರಗಳಿಗೆ ಕಿವಿಯನ್ನು, ಮನಸ್ಸನ್ನು ನೀಡಬಾರದು, ಕರ್ಮವನ್ನು ತಮ್ಮ ಕರ್ತವ್ಯವೆಂದು ನಿಸ್ವಾರ್ಥದಿಂದ ನಡೆಸಬೇಕು. ಫಲಾಫಲಗಳು ತನ್ನಂತಾನೇ ದೊರೆಯುತ್ತವೆ ಎನ್ನುವ ಅನುಭಾವಾತ್ಮಕ ವಿಚಾರಗಳನ್ನು ಈ ಕೃತಿಯಲ್ಲಿ ಜಗನ್ನಾಥದಾಸರು ವಿವರಿಸಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಹಯವದನ ಪುರಾಣಿಕ, ಕೆ. (ಅನು,) (2021). *ಶ್ರೀಹರಿಕಥಾಮೃತಸಾರ ಒಂದು ಅಧ್ಯಯನ. ಸಂಪುಟ–4,* ಅಖಿಲ ಭಾರತ ಮಾಧ್ವಮಹಾ ಮಂಡಲ (ರಿ).
- ಕೃಷ್ಣರಾವ್, ಕೆ.ಎಂ. (1956). *ಶ್ರೀ ಜಗನ್ನಾಥದಾಸರು.* ಉಷಾ ಸಾಹಿತ್ಯ ಮಾಲೆ.
- ಕೃಷ್ಣರಾವ್, ಕೆ.ಎಂ. (1961). ಶ್ರೀಹರಿಕಥಾಮೃತ ಸಾರ. ಉಷಾ ಸಾಹಿತ್ಯ ಮಾಲೆ.
- ವೇದವ್ಯಾಸಾಚಾರ್ಯ, ಎಚ್.ಕೆ. (1965). *ಕರ್ನಾಟಕದ ಹರಿದಾಸರು.* ಶ್ರೀಪರಿಮಳ ಸಂಶೋಧನ ಮತು ಪ್ರಕಾಶನ ಮಂದಿರ.